

ದ್ವೀಪದ ಮಕ್ಕಳು



ತೇಲು ದ್ವೀಪ ನಿರ್ಮಿಸಲು ಬಳಸುವ ಟಟೊರಾ ಕಡ್ಡಿಗಳನ್ನು ಪ್ರದರ್ಶಿಸುತ್ತಿರುವ ಮನೆಯ ಯಜಮಾನ



ಕಲಾತ್ಮಕ ವಸ್ತುಗಳು ಮತ್ತು ಬಣ್ಣಬಣ್ಣದ ಕಲಾಕೃತಿಗಳ ಪ್ರದರ್ಶನ, ಮಾರಾಟ

## 'ಟುಕ್ ಟುಕ್' ಹಮಾರ ಬಜಾಜ್

ಪೆರು ದೇಶದ ಗಡಿಯಲ್ಲಿರುವ ಪ್ಯುನೊ ಪಟ್ಟಣ ಟಿಟಿಕಾಕ ಸರೋವರದ ಅಂಚಿನಲ್ಲಿದೆ. ಸರೋವರದಲ್ಲಿ ಸುತ್ತಾಡಲು ನಾವು ಮೋಟಾರ್ ಬೋಟ್ ಏರಿದೆವು. ಅದಕ್ಕೂ ಮುನ್ನ ನಡೆದು ಬರುವಾಗ ಅಲ್ಲಿ ಸುಂದರವಾದ ಆಟೊ ರಿಕ್ಷಾಗಳು ಕಂಡವು. ಅವನ್ನು ಅವರು 'ಟುಕ್–ಟುಕ್' ಎನ್ನುತ್ತಾರೆ.

ನಮ್ಮ ಜೊತೆಗಿದ್ದವರು 'ಟುಕ್ ಟುಕ್'ಗಳನ್ನು ನೋಡಿದವರೇ ರಾಗವಾಗಿ 'ಹಮಾರ ಬಜಾಜ್...' ಎಂದು ಅದರ ಜೊತೆ ಫೋಟೊ ತೆಗೆಸಿಕೊಂಡರು. ಹೌದು, ಅದು ಭಾರತದ ಬಜಾಜ್ ಕಂಪೆನಿಯ ಆಟೊ ರಿಕ್ಷಾ! ಖುಷಿಯಾಯಿತು. ಮುಂದೆ ಸಾಗುತ್ತಿರುವಾಗ ಭಾರತದ ಟಿವಿಎಸ್ ಕಂಪೆನಿಯ ಆಟೊ ರಿಕ್ಷಾ ಕೂಡ ಕಾಣಿಸಿತು. ಅಷ್ಟು ದೂರದ ದೇಶದಲ್ಲಿ ನಮ್ಮ ದೇಶೀ ಉತ್ಪಾದನೆಯ ಗುರುತುಗಳು ಕಂಡು ನಾವು ಹೆಮ್ಮೆಪಟ್ಟೆವು.

## ಉರೋಸ್ ಎಂಬ ತೇಲುವ ದ್ವೀಪಗಳು

ಅಮೆಜಾನ್ ಕಾಡುಗಳಲ್ಲಿ ವಾಸಿಸುತ್ತಿದ್ದ ಉರೊ ಎಂಬ ಬುಡಕಟ್ಟಿನ ಜನ ವಲಸೆ ಬಂದಾಗ ಸ್ಥಳೀಯರು ಇವರಿಗೆ ನೆಲೆಸಲು ಅವಕಾಶ ಕೊಡಲಿಲ್ಲ. ಆಗ ಅವರು ಈ ಸರೋವರದ ನೀರಿನಲ್ಲಿ ಬೆಳೆಯುವ ಟಟೊರಾ ಎಂಬ ಜೊಂಡನ್ನು ಒಣಗಿಸಿ, ಹೆಣೆದು, ನೀರಿನ ಮೇಲೆ ತೇಲುವ ಮನೆಗಳನ್ನು ಮಾಡಿಕೊಂಡರು. ಹಲವು ಮನೆಗಳು, ಶಾಲೆ, ಸಾಮೂಹಿಕ ಭವನ ಸೇರಿದಂತೆ ತೇಲುವ ಹಳ್ಳಿಗಳನ್ನೇ ನಿರ್ಮಿಸಿಕೊಂಡಿದ್ದಾರೆ. ಗಟ್ಟಿ ಮತ್ತು ಉದ್ದವಾದ ಜೊಂಡಿನ ಕಡ್ಡಿಗಳನ್ನು ಭದ್ರವಾಗಿ ಹೆಣೆದಿರುತ್ತಾರೆ. ಒಂದು ಮನೆಯಿಂದ ಇನ್ನೊಂದು ಮನೆಗೆ ದೋಣಿಯಲ್ಲಿ ಹೋಗಬಹುದು. ಈ ರೀತಿಯ ಸುಮಾರು 41 ತೇಲುವ ಹಳ್ಳಿಗಳಿವೆ.

ತೇಲುವ ಹಳ್ಳಿ ನೋಡಲು ಪ್ರವಾಸಿಗರು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಈ ಜನರು ಕೃಷಿ, ಮೀನುಗಾರಿಕೆ, ನೇಯ್ಗೆಯನ್ನೇ ಬದುಕಾಗಿಸಿಕೊಂಡಿದ್ದಾರೆ. ಪ್ರವಾಸೋದ್ಯಮವೂ ಇವರನ್ನು ಪೊರೆಯುತ್ತಿದೆ. ನಾವು ನಮ್ಮ ಮೋಟಾರ್ ಬೋಟ್‌ನಿಂದ ಉರೋಸ್ ಹಳ್ಳಿಯ ಮನೆಯೊಂದಕ್ಕೆ ಭೇಟಿ ಕೊಟ್ಟೆವು.

ಈ ಜೊಂಡಿನ ಮೇಲೆ ನಡೆಯುವುದು ಸುಲಭವಲ್ಲ. ಎಡಮತ್ತು ಬಲಕ್ಕೆ ವಾಲುತ್ತಾ ಅಡ್ಡಡ್ಡ ಕಾಲುಗಳನ್ನಿಡುತ್ತಾ ಮುಂದುವರೆಯಬೇಕು. ತೇಲುವ ಜೊಂಡಿನ ಮೇಲೆ ಹೀಗೇ ನಡೆಯುತ್ತಾ ನಮ್ಮ ನಡಿಗೆಯ ಶೈಲಿಯೇ ಬದಲಾಗಿಬಿಡುತ್ತದೆ ಎಂದು ನಾವು ತಮಾಷೆ ಮಾಡಿದಾಗ, 'ತೇಲುವ ಹಳ್ಳಿಗಳಲ್ಲಿ ವಾಸಿಸುವವರು ನಗರಕ್ಕೆ ಬಂದಾಗ ಇವರ ನಡಿಗೆಯ ಶೈಲಿ ನೋಡಿಯೇ ನಾವು ಗುರುತು ಹಿಡಿದುಬಿಡುತ್ತೇವೆ' ಎಂದು ಸ್ಥಳೀಯ ಗೈಡ್ ಹೇಳಿದ.

ಮನೆಯ ಮುಂದೆ ಅವರು ತಯಾರಿಸಿರುವ ಕಲಾತ್ಮಕ ವಸ್ತುಗಳು, ಕಸೂತಿ ವಸ್ತ್ರ ಹಾಗೂ ಇತರೆ ಬಣ್ಣಬಣ್ಣದ ಕಲಾಕೃತಿಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಟ್ಟಿರುತ್ತಾರೆ. ಮನೆಯೊಳಗೆ ಕಲ್ಲುಗಳನ್ನು ಬಳಸಿ ಅಡುಗೆ ಒಲೆಯನ್ನು ಮಾಡಿಕೊಂಡಿದ್ದರು. ಸೋಲಾರ್ ದೀಪ, ಮೊಬೈಲ್ ಫೋನ್ ಸಹ ಕಂಡೆವು. ಮನೆಗಳು ನೀರಿನಲ್ಲಿ ತೇಲಿ ಹೋಗದಂತೆ ತಳದಲ್ಲಿ ದೊಡ್ಡ ಕಲ್ಲುಗಳಿಗೆ ಹಗ್ಗ ಕಟ್ಟಿ ಭದ್ರ ಮಾಡಿರುವರು. ಪ್ರಶಾಂತ ಸರೋವರದಲ್ಲಿ ಭಾರೀ ಅಲೆಗಳಿಲ್ಲದಿರುವುದು ಇವರಿಗೆ ವರದಾನವಾಗಿದೆ. ಬಿದಿರು ಮತ್ತು ಟಟೊರಾ ಜೊಂಡಿನಿಂದ ಇವರು ನಿರ್ಮಿಸಿರುವ ಕಲಾತ್ಮಕ ದೋಣಿಗಳು ಆಕರ್ಷಕವಾಗಿವೆ.

ನಾವು ಭೇಟಿಕೊಟ್ಟಿದ್ದ ಪುಟ್ಟ ಉರೋಸ್ ಹಳ್ಳಿಯ ಜೊಂಡಿನ ದ್ವೀಪದಲ್ಲಿ ನಾಲ್ಕು ಮನೆಗಳಿದ್ದವು. ಎಲ್ಲಾ ಮನೆಗಳವರೂ ಸಂಬಂಧಿಕರೇ. ಇಡೀ ಕುಟುಂಬಕ್ಕೆ ಒಬ್ಬ ಯಜಮಾನ. ಆತ ಒಂದು ರಂಪವನ್ನು ಪ್ರದರ್ಶಿಸುತ್ತಾ, 'ಅಕಸ್ಮಾತ್ ನಮ್ಮಲ್ಲಿ ಕೌಟುಂಬಿಕ ಕಲಹವಾದಲ್ಲಿ ಜೊಂಡಿನ ದ್ವೀಪವನ್ನು ಕತ್ತರಿಸಿ ಭಾಗ ಮಾಡಿಕೊಳ್ಳುತ್ತೇವೆ. ಅಲ್ಲದೆ, ಇದರ ಆಯಸ್ಸು 30 ವರ್ಷಗಳಷ್ಟೇ. ನಂತರ ಹೊಸ ಜೊಂಡಿನ ದ್ವೀಪ ಮತ್ತು ಮನೆ ನಿರ್ಮಿಸಿಕೊಳ್ಳುತ್ತೇವೆ. ನಿರ್ಮಾಣಕ್ಕೆ ಒಂದು ವರ್ಷ ಬೇಕಾಗುತ್ತದೆ' ಎಂದು ಆ ವಿಧಾನಗಳನ್ನು ವಿವರಿಸಿದ.

### ದೈತ್ಯ ಕಪ್ಪೆಗಳಿಗೆ ನೆಲೆ

ಟಿಟಿಕಾಕಾ ಸರೋವರವು ಟೆಲ್ಮಾಟೋಬಿಯಸ್ ಕ್ಯುಲಿಯಸ್ ಎಂಬ ದೈತ್ಯ ಕಪ್ಪೆಗಳಿಗೆ ನೆಲೆ. ಜಲವಾಸಿಗಳಾದ ಈ ಕಪ್ಪೆಗಳು 100 ಮೀಟರ್ ಆಳದಲ್ಲಿ ಕಂಡುಬರುತ್ತವೆ. 14.5 ಸೆಂ.ಮೀ. ವರೆಗೆ ಬೆಳೆಯುತ್ತವೆ. ಕೆಲವರು ಇನ್ನೂ ದೊಡ್ಡದ್ದು ಕಂಡಿರುವುದಾಗಿ ಹೇಳುತ್ತಾರೆ.

ಸ್ಥಳೀಯ ಉರೋಸ್ ಜನರಿಗೆ ನೆಲೆಯಾಗಿರುವ ಈ ಮಾನವ ನಿರ್ಮಿತ ತೇಲುವ ದ್ವೀಪಗಳನ್ನು ಟಟೊರಾ ಒಣಕಡ್ಡಿಗಳನ್ನು ಪದರಗಳ ಮೇಲೆ ಪದರಗಳನ್ನು ಪೇರಿಸಿ ರಚಿಸಲಾಗಿದೆ. ಉರೋಸ್ ಸಮುದಾಯದ ಜೀವನಾಡಿಯಾದ ಈ ನೀರು–ನಿರೋಧಕ ಸಸ್ಯದಿಂದ ದೋಣಿಗಳು, ಮನೆಗಳು, ಛಾವಣಿಗಳು, ಹಾಸಿಗೆಗಳು ಮುಂತಾದವುಗಳನ್ನು ಮಾಡಿಕೊಳ್ಳುವರು. ಈ ಸಸ್ಯವನ್ನು ಆಹಾರವಾಗಿಯೂ, ಔಷಧಿಯಾಗಿಯೂ ಬಳಸುವರು. ಇದರ ಹೂಗಳಿಂದ ಚಹಾ ಮಾಡುತ್ತಾರೆ.

ಪುರಾತನ ಇಂಕಾ ಜನರಿಗೆ ಟಿಟಿಕಾಕ ಸರೋವರ ಬಹಳ ಪವಿತ್ರವಾದದ್ದು. ಇಂಕಾದ ಮೊದಲ ರಾಜ ಮಾಂಕೊ ಕ್ಯಾಪಕ್ ಈ ಸರೋವರದಲ್ಲಿ ಉದಿಸಿದನೆಂಬುದು ಅವರ ನಂಬಿಕೆ. ಟಿಟಿಕಾಕ ಎಂಬ ಹೆಸರು ಬರಲು ಕಾರಣ ಈ ಸರೋವರ ಪ್ಯೂಮಾ ಪ್ರಾಣಿಯ ಹೋಲಿಕೆಯಿರುವುದರಿಂದ ಎಂದು ಸ್ಥಳೀಯರು ಹೇಳುತ್ತಾರೆ. 2000 ಇಸವಿಯಲ್ಲಿ ಟಿಟಿಕಾಕ ಸರೋವರದ ಅಡಿಯಲ್ಲಿ 1500 ವರ್ಷಗಳಷ್ಟು ಹಿಂದಿನ ದೇವಸ್ಥಾನದ ಅವಶೇಷಗಳು ಪತ್ತೆಯಾಗಿವೆ.

ಪ್ರತಿಕ್ರಿಯಿಸಿ: feedback@sudha.co.in